# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

ಒ.ಎಸ್.ನಂಃ 1/2022

ಪಿಡಬ್ಲ್ಯುಃ - 1

<u>ದಿನಾಂಕಃ **23.01.2024** ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎಂ ಎಸ್ ಬಿ ವಕೀಲರಿಂದಃ</u>

ನನ್ನ ತಂದೆ ತೀರಿಕೊಳ್ಳುವ ಸಮಯಕ್ಕೆ ಅವರಿಗೆ 87 ವರ್ಷ ವಯಸ್ಸಾಗಿತ್ತು. ನನ್ನ ತಾಯಿ 2002 ರಲ್ಲಿ ತೀರಿಕೊಂಡಿದ್ದಾರೆ. ಆಗ ಅವರಿಗೆ 86 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತಾಯಿಗೆ 6 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನನ್ನ ಅಣ್ಣ ಪೊನ್ನಪ್ಪ ಅವರು 2022 ರ ವರ್ಷದಲ್ಲಿ ತೀರಿಕೊಂಡಿದ್ದಾರೆ, ಅವರಿಗೆ 77 ವರ್ಷ ವಯಸ್ಸಾಗಿತ್ತು. ನನ್ನ 2 ನೇ ಅಣ್ಣ ಉತ್ತಪ್ಪ ಅವರು 2023 ರಲ್ಲಿ ತೀರಿಕೊಂಡಿದ್ದಾರೆ. 3 ನೇ ಅಣ್ಣ ಅಯ್ಯಪ್ಪ ಜೀವಂತವಾಗಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿದೆ. ಅಯ್ಯಪ್ಪ ವಕೀಲರಾಗಿ ಇದೇ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾರೆ. 4 ನೇ ಅಣ್ಣ ಅಪ್ಪಯ್ಯ ಈ ದಾವಾದ ಪ್ರತಿವಾದಿ. ಅವರು ವ್ಯವಸಾಯ ಮಾಡುತ್ತಾರೆ. ಅಪ್ಪಯ್ಯನ ನಂತರ ನಾನು ಹುಟ್ಟಿದ್ದೇನೆ. ನಾನು 15 ವರ್ಷ ಸೈನ್ಯದಲ್ಲಿದ್ದು, ಈಗ ಖಾಸಗಿ ಕೆಲಸ ಮಾಡುತ್ತಿದ್ದು, ಹಾಲಿ ವ್ಯವಸಾಯ ಮಾಡುತ್ತಿದ್ದೇನೆ.

2. ನಾನು 1975 ರಿಂದ 1990 ರ ಜುಲೈವರೆಗೆ ಸೈನ್ಯದಲ್ಲಿ ಕೆಲಸ ಮಾಡಿರುತ್ತೇನೆ. ಅದಾದ ನಂತರ ನಂಜನಗೂಡಿನ ಸೌತ್ ಇಂಡಿಯಾ ಪೇಪರ್ ಮಿಲ್ ನಲ್ಲಿ 9 ವರ್ಷ ಕೆಲಸ ಮಾಡಿರುತ್ತೇನೆ. ಅದಾದ ನಂತರ ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ಈ ದಾವಾ ಸಲ್ಲಿಸುವ ಸಮಯದಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೆ , ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನಾನು ಖಾಯಂ ಆಗಿ ಮೈಸೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನಾನು ವ್ಯವಸಾಯ ಭೂಮಿಗೆ ಬಂದಾಗ ಕಾಟಕೇರಿಯಲ್ಲಿ ಸಣ್ಣ ಮನೆ ಇದೆ, ಅಲ್ಲಿಗೆ ಬಂದು ಇದ್ದು ಹೋಗುತ್ತೇನೆ. ಸದರಿ ಮನೆ ಕಾಟಕೇರಿಯ ಸರ್ವೆ ನಂಬರ್ 291 ರಲ್ಲಿ ಇದೆ.

3. ನನ್ನ ನಂತರ ನನ್ನ ತಮ್ಮ ಲಿಂಗರಾಜು ಇದ್ದು, ಅವರು ಸುಮಾರು ವರ್ಷಗಳ ಹಿಂದೆ ಬಾಂಬೆಗೆ ಹೋಗಿ ನೆಲೆಸಿದ್ದಾರೆ, ಅವರಿಗೂ ನನಗೂ ಈಗ ಸಂಪರ್ಕ

ಇರುವುದಿಲ್ಲ. ನನ್ನ ತಮ್ಮ 2002 ರಲ್ಲಿ ಬಾಂಬೆಗೆ ಹೋಗಿರಬಹುದು. ನನಗೆ ಇಬ್ಬರು ತಂಗಿಯರು ಇದ್ದಾರೆ. ಮೊದಲನೇ ತಂಗಿಯ ಹೆಸರು ಲೀಲಾವತಿ ಉತ್ತಪ್ಪ ಅವರು ಎಲ್ ಐ ಸಿ ಯಲ್ಲಿ ಕೆಲಸ ಮಾಡುತ್ತಿದ್ದು, 5 ವರ್ಷಗಳ ಹಿಂದೆ ನಿವೃತ್ತಿ ಹೊಂದಿ ಮೈಸೂರಿನಲ್ಲಿ ವಾಸವಿದ್ದಾರೆ. 2 ನೇ ತಂಗಿಯ ಹೆಸರು ಅಕ್ಕಮ್ಮ, ಅವರು ಮದುವೆಯಾಗಿ ಬೆಂಗಳೂರಿನ ಗಂಡನ ಮನೆಯಲ್ಲಿ ವಾಸವಿದ್ದಾರೆ.

4. ನನ್ನ ತಂಗಿ ಲೀಲಾವತಿ ಯಾವಾಗ ಕೆಲಸಕ್ಕೆ ಸೇರಿದರು ಎಂದು ನಿಖರವಾಗಿ ನನಗೆ ದಿನಾಂಕ ಹೇಳಲು ಆಗುವುದಿಲ್ಲ. ಲೀಲಾವತಿಯವರು ಕೆಲಸಕ್ಕೆ ಸೇರಿದಾಗ ಮೊದಲು ಮಡಿಕೇರಿಯಲ್ಲಿ ಕೆಲಸ ಮಾಡುತ್ತಿದ್ದರು, ಅದಾದ ನಂತರ ಅವರು ಬೆಂಗಳೂರಿಗೆ ಹೋಗಿರುತ್ತಾರೆ. ಲೀಲಾವತಿ ಕೆಲಸಕ್ಕೆ ಸೇರುವಾಗ ಮತ್ತು ಬೆಂಗಳೂರಿಗೆವರ್ಗ ಆಗುವಾಗ ನಾನು ಮಡಿಕೇರಿಯಲ್ಲಿ ವಾಸವಿರಲಿಲ್ಲ, ಆಗ ನಾನು ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದೆ. ಲೀಲಾವತಿಯವರು ನಿವೃತ್ತಿ ಹೊಂದುವವರೆಗೂ ಬೆಂಗಳೂರಿನಲ್ಲೇ ಕೆಲಸ ಮಾಡುತ್ತಿದ್ದರು.

5. ನನ್ನ ತಂಗಿಯರ ಮದುವೆ ಯಾವಾಗ ಆಯಿತು ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ನಾನು ಸೈನ್ಯದಲ್ಲೇ ಇದ್ದು, ಮದುವೆಗೆ ಬಂದು ಹೋಗಿರುತ್ತೇನೆ. ನನ್ನ 2 ನೇ ತಂಗಿ ಅಕ್ಕಮ್ಮ ಮದುವೆಯಾದ ನಂತರ ಬೆಂಗಳೂರಿನಲ್ಲಿ ತನ್ನ ಗಂಡನ ಮನೆಯಲ್ಲಿ ಈಗಲೂ ಇದ್ದಾಳೆ. ನನ್ನ 1 ಮತ್ತು 2 ನೇ ಅಣ್ಣಂದಿರು ಬದುಕಿದ್ದಾಗ, ಅವರು ಅವರ ಆಸ್ತಿಯಲ್ಲಿ ಹಾಗೂ ನನ್ನ ಇತರ ಅಣ್ಣಂದಿರು ಸಹ ತಮಗೆ ಬಂದ ಆಸ್ತಿಯಲ್ಲಿ ಉಳುಮೆ ಮಾಡಿಕೊಂಡು ಇದ್ದರು.

6. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಪಾಲು ಮಾಡಿಕೊಂಡಿರುವ ಆಸ್ತಿ ಮೂಲ ಪೂಪಂಡ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಪೂಪಂಡ ಕುಟುಂಬದ ಸುಬ್ಬಯ್ಯ ಮತ್ತು ಅಕ್ಕವ್ವರವರು ಅದರ ಮೂಲ ಮಾಲೀಕರು. ಪೂಪಂಡ ಸುಬ್ಬಯ್ಯರವರ ಮಗಳಾದ ಬೊಳ್ಳಮ್ಮಳನ್ನು ಕುಂಚೆಟ್ಟೀರ ಕುಟುಂಬದ ಪೊನ್ನಪ್ಪರವರಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಸದರಿ ಬೊಳ್ಳಮ್ಮ ಮತ್ತು ಪೊನ್ನಪ್ಪರವರ ಮಗ ನನ್ನ ತಂದೆ ಎಂದರೆ ಸರಿ. ಪೂಪಂಡ ಸುಬ್ಬಯ್ಯರವರಿಗೆ ಬೊಳ್ಳಮ್ಮ ಒಬ್ಬಳೇ ಮಗಳು, ಅವರಿಗೆ ಗಂಡು ಮಕ್ಕಳು

ಇರಲಿಲ್ಲ. ಪೂಪಂಡ ಸುಬ್ಬಯ್ಯ ತೀರಿಕೊಂಡ ನಂತರ ಅವರ ಆಸ್ತಿ ಅವರ ಹೆಂಡತಿ ಅಕ್ಕವ್ವ ಮತ್ತು ಬೊಳ್ಳಮ್ಮನಿಗೆ ಬಂತು ಎಂದರೆ ಸರಿ.

7. ಬೊಳ್ಳಮ್ಮನ ಗಂಡ ಪೊನ್ನಪ್ಪ ತೀರಿಕೊಂಡರು ಎಂದರೆ ಸರಿ. ಬೊಳ್ಳಮ್ಮನ ಗಂಡನ ತೀರಿಕೊಂಡ ನಂತರ ಬೊಳ್ಳಮ್ಮ ಮತ್ತು ಆಕೆಯ ಮಗ ಅಯ್ಯಮ್ಮರನ್ನು, ಬೊಳ್ಳಮ್ಮನ ತಾಯಿ ಅಕ್ಕವ್ವ ಅವರ ಮನೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ಅಕ್ಕವ್ವ ಅಯ್ಯಮ್ಮ ಅವರನ್ನು ದತ್ತು ತೆಗೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಅಯ್ಯಮ್ಮರವರನ್ನು ಅಕ್ಕವ್ವ ದತ್ತು ತೆಗೆದುಕೊಂಡು ಬಂದಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ಅಕ್ಕವ್ವ ದತ್ತು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಬೊಳ್ಳಮ್ಮನ ಗಂಡ ತೀರಿಕೊಂಡಿದ್ದರಿಂದ, ಅಕ್ಕವ್ವ ಒಬ್ಬಳೇ ಇದ್ದಿದರಿಂದ ಬೊಳ್ಳಮ್ಮ ಮತ್ತು ಅಯ್ಯಮ್ಮರವರನ್ನು ತನ್ನ ಮನೆಗೆ ಕರೆಸಿಕೊಂಡು ತನ್ನ ಮನೆಯಲ್ಲೇ ಇರಿಸಿಕೊಂಡಿದ್ದರು ಎಂದರೆ ಸರಿಯಲ್ಲ.

8. ಅಕ್ಕವ್ವ ತೀರಿಕೊಂಡ ನಂತರ ಅಕ್ಕವ್ವನ ಆಸ್ತಿಗಳೆಲ್ಲಾ ವಾರಸದಲ್ಲಿ ಆಕೆಯ ಮಗಳು ಬೊಳ್ಳಮ್ಮನಿಗೆ ಬಂತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಕ್ಕವ್ವ ತೀರಿಕೊಂಡ ನಂತರ ಆಸ್ತಿಗಳೆಲ್ಲಾ ಅಯ್ಯಮ್ಮರವರ ಹೆಸರಿಗೆ ಬಂದಿದೆ. 1925 ರಲ್ಲಿ ಅಕ್ಕವ್ವ ತೀರಿಕೊಂಡಿದ್ದಾರೆ. ಬೊಳ್ಳಮ್ಮ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಬೊಳ್ಳಮ್ಮನ ಆಸ್ತಿಗಳೆಲ್ಲಾ ಆಕೆ ತೀರಿಕೊಂಡ ನಂತರ ಆಕೆಯ ಮಗ ಅಯ್ಯಮ್ಮನವರಿಗೆ ವಾರಸು ಆಗಿ ಬಂತು ಎಂದರೆ ಸರಿಯಲ್ಲ. ಅಕ್ಕವ್ವನಿಂದ ಬೊಳ್ಳಮ್ಮನಿಗೆ, ಬೊಳ್ಳಮ್ಮನಿಂದ ಅಯ್ಯಮ್ಮನವರಿಗೆ ಬಂದ ಆಸ್ತಿಗಳನ್ನು ಅಯ್ಯಮ್ಮನವರು ಅವರ ಜೀವಿತ ಅವಧಿಯಲ್ಲಿ ಪರಿಪೂರ್ಣ ಮಾಲೀಕರಾಗಿ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.